ಗಣೇಶ ಎಂ. ಪೈ, ಬೆಂಗಳೂರು
ವಯೋವೃದ್ಧರೊಬ್ಬರು ಪ್ರತಿ ಬಾರಿಯೂ ಇದೇ ತನ್ನ ಕೊನೆಯ ಚುನಾವಣೆ ಎನ್ನುತ್ತಾ ವಚನಭ್ರಷ್ಟರಾಗುವರಲ್ಲಾ...?



5 ವರ್ಷ ಇರಲ್ಲ ಅನ್ಕೊಂಡಿದ್ರಾರೆ. ಟಿಕೆಟ್ ಬುಕ್ ಆಗಿದ್ರೂ ಮೇಲಿಂದ ವೀಸಾ ಬಂದಿಲ್ಲ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಹೆಂಡತಿಗೂ, ಹೆಲ್ಮೆಟ್‌ಗೂ ವ್ಯತ್ಯಾಸವೇನು?
ಹೆಲ್ಮೆಟ್ ತಲೆ ಕಾಯುತ್ತದೆ; ಹೆಂಡತಿ ತಲೆಮಾರು ಕಾಯುತ್ತಾಳೆ.

ವಿಜಯ. ಚ. ಬಿದರಹಳ್ಳಿ, ಹಿರೇಹಡಗಲಿ
ಪಾಪಿಗಳ ಭಯದಲ್ಲಿ ಸರಸ್ವತಿ ಗುಪ್ತಗಾಮಿನಿ ಆದಳಂತೆ. ಹೌದಾ?
ಊಹೂಂ. ಹುಚ್ಚುಚ್ಚಾರವೇ ಸರಿಯೆಂದು ವಾದಿಸುವವರಿಗೆ ಅಂಜಿ ಅಡಗಿಕೊಂಡಳು.

ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಸೈಕಲ್ ಹೋಯ್ತು, ಕಾರ್ ಬಂತು. ಕಾರ್ ಹೋಯ್ತು, ವಿಮಾನಯಾನ ಸಿಕ್ಕಿತು. ಮುಂದೆ?



ಬೊಜ್ಜು ಬಂತು; ಜಾಗಿಂಗ್, ಯೋಗ ಸಿಕ್ಕಿತು.

ವಿ. ಹಮೀದ್, ವಿಟ್ಲ
ಬೇಕಾದಷ್ಟು ಸಂಪತ್ತಿದ್ದರೂ ನಟಿಯರು ಬಿಕಿನಿಯನ್ನೇ ಧರಿಸಲು ಕಾರಣವೇನು?
ತನ್ನ ಸಂಪತ್ತಿನ ಮೂಲವನ್ನು ಯಾರೇ ಪ್ರಶ್ನಿಸುವ ಮುನ್ನವೇ ತೋರಿಸಿಬಿಡುವ (ಅ)ಪಾರದರ್ಶಕತೆ.

ಎಮ್.ಎಸ್. ಉಷಾ ಪ್ರಕಾಶ್, ಮೈಸೂರು
ಪ್ರೇಮಿಗಳ ದಿನದಂದು ಆಗುವ ಗುಲಾಬಿಯ ವ್ಯಾಪಾರ ಮಕ್ಕಳ ದಿನಾಚರಣೆಯಂದು ಆಗುವುದಿಲ್ಲವಲ್ಲಾ....?
ಅಗತ್ಯವಿಲ್ಲ. ಮಕ್ಕಳ ನಿರ್ಮಲ ನಗೆಯ ಮುಂದೆ ಗುಲಾಬಿ ಮಂಕು ಮಂಕು.

ಸುಲೋಚನ ಜೆ. ರಾವ್, ಬೆಂಗಳೂರು
ಸ್ವದೇಶಿಗಳೂ ವಿದೇಶೀಯ ವಸ್ತುಗಳೆಂದರೆ ಬಾಯಿ ಬಿಡುವುದೇಕೆ?
ಅನ್ಯರಾ ಒಡಹುಟ್ಟಿದಂಗನೆಯ ಕರೆತಂದು ತನ್ನಮನೆಗವಳ ಯಜಮಾನಿಯೆನಿಸುವುದು ನಮ್ಮ ಸಮ್ಮತ ಪದ್ಧತಿ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
ಅಮಾಯಕರು ಎಲ್ಲಾ ಸಮಸ್ಯೆಗಳಿಂದ ಮುಕ್ತರಾಗಿರುತ್ತಾರೆ. ಏಕೆ?
ಸುಖದ ಕಲ್ಪನೆ ಇಲ್ಲದವರಿಗೆ ಕಷ್ಟ ಕಷ್ಟವೆನಿಸುವುದಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ
60ಕ್ಕೆ ಅರಳುಮರಳು. 80ಕ್ಕೆ, 100ಕ್ಕೆ?
80ಕ್ಕೆ ಹೊರಳು ಒರಲು, 100ಕ್ಕೆ ನರಳು ತೆರಳು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಸತ್ತಮೇಲೂ ಬದುಕುವವರು ಯಾರು?
ದಾಖಲಿಸಲ್ಪಟ್ಟವರು; ವಾಲ್ಮೀಕಿಯ ದಾಖಲಲ್ಲಿ ರಾಮನೂ ಉಳಿದ, ರಾವಣನೂ ಉಳಿದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಹಳ್ಳಿಯ ಜನರಿಗೂ, ಶಹರದ ಜನರಿಗೂ ವ್ಯತ್ಯಾಸವೇನು?
ಹಳ್ಳಿಯವರು ನಾಟಿ; ಶಹರದವರು **naughty**.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಲ್ಯಾಂಗ್ವೇಜಿಗೂ, ಬಾಡಿ ಲ್ಯಾಂಗ್ವೇಜಿಗೂ ವ್ಯತ್ಯಾಸವೇನು?
ಒಂದೇ ಅಕ್ಷರ ವ್ಯತ್ಯಾಸ. ಅದು **prose study**, ಇದು **pose study**.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
ಒಂದು ಕೊಂಡರೆ ಇನ್ನೊಂದು ಉಚಿತ' ಯೋಜನೆಯಲ್ಲಿ ಯಾರಿಗೆ ಲಾಭ ರಾಮ್‌ಜೀ?
ಬೋರ್ಡ್ ಬರೆಯುವವನಿಗೆ. ಕೊಳ್ಳುವ, ಮಾರುವ ಜನಕ್ಕೆ ಅದದೇ ಮಾರ್ಜಿನ್ನು.

## ಬಹುಮಾನಿತ ಪ್ರಶ್ನೆ

ರತ್ನಾ ಅಶೋಕ ಗೊರವರ, ಧಾರವಾಡ
ಬಂಗಲೆಗಳನ್ನು 'ಸಾಯಿ ಕುಟೀರ'. 'ರಾಘವೇಂದ್ರ ಕುಟೀರ' ಎಂದು ಕರೆದರೆ ಕುಟೀರಗಳನ್ನು ಏನೆಂದು ಕರೆಯಬೇಕು?
ಎಲೆಬಂಗಲೆ, ಮಣ್ಣಿನ ಮಹಲ್, ಸಣ್ಣವಿಲ್ಲಾ, ಪೆನ್ನುರಿಪ್ಯಾಲೇಸ್ ಎನ್ನಿ.

ಬಿ. ಬೋರೇಗೌಡ, ಸರಸ್ವತಿಪುರ
ಧರ್ಮ ಮತ್ತು ಹಣಗಳೆರಡೂ ಕುಸ್ತಿಗಿಳಿದರೆ ಯಾವುದು ಗೆಲ್ಲುತ್ತದೆ ಗುರುದೇವಾ?
ಧರ್ಮವೇ; ಆದರೆ ಧರ್ಮ ಆ ಗೆಲುವನ್ನು ಆಚರಿಲು ಹಣವನ್ನು ಅವಲಂಬಿಸುತ್ತದೆ.

ಭಾರತಿ ಮಾನಗೆ, ಹೊನ್ನಾವರ
ದೇಶದ ತುಂಬಾ ಯುವಜನಾಂಗವಿದ್ದರೂ ಚುನಾವಣೆಗೆ ಮಾತ್ರ ವಯಸ್ಸಾದವರೇ ನಿಲ್ಲುವರು. ಏಕೆ?
ಯುವಕರಲ್ಲಿ ಚುನಾವಣೆಗೆ ಅಗತ್ಯ ಕ್ವಾಲಿಫಿಕೇಷನ್ನಾದ ಮನೆಹಾಳುತನ ಇನ್ನೂ ಪಕ್ವವಾಗಿರುವುದಿಲ್ಲ.

ಬೂಕನಕೆರೆ ವಿಜೇಂದ್ರ, ಮೈಸೂರು
ಉಚಿತವಾಗಿ ಪಡೆಯುವ ವಸ್ತು ಯಾವಾಗಲೂ ಕಳಪೆ ಆಗಿರುತ್ತದೆಯಲ್ಲಾ...?



ಚೆನ್ನಾಗಿರುವುದನ್ನು ಕೊಟ್ಟರೆ ಅದನ್ನು ಕಾಪಾಡಿಕೊಳ್ಳುವುದಿಲ್ಲವಲ್ಲ! ಉದಾಹರಣೆಗೆ ಪರಿಸರ.

ರತ್ನಾ ರಾಜ್‌ಕುಮಾರ್, ಹಾಸನ
ನಮ್ಮ ಕಾಲದಲ್ಲಿ ಹೀಗಿರಲಿಲ್ಲ ಎನ್ನುವವರಿಗೆ ಏನೆಂದು ಹೇಳಲಿ?
ಮುಂದೆ ಹೀಗೆಯೂ ಇರುವುದಿಲ್ಲ ಎನ್ನಿ. ಆಚಾರವಿಚಾರಗಳ ಆರೋಹಣ, ಅವರೋಹಣವೇ ಜೀವಗೀತೆ.

ಪಿ. ಜಯವಂತ ಪೈ, ಕುಂದಾಪುರ
ಚುನಾವಣೆಯಲ್ಲಿ ಗೆದ್ದವರಿಗೂ ಹಾಲಿನ ಅಭಿಷೇಕ ಮಾಡಲು ಶುರು ಮಾಡಿದ್ದಾರಲ್ಲಾ...?
ಹಾವಿಗೆ ಹಾಲೆರೆಯುವುದು ನಮ್ಮ ಪುರಾತನ ಪದ್ಧತಿ.

■ ರಾಮ್